# ಅನುಬಂಧ ಭಾಗ

ಡೇವಿಡ್ ರೋಪರ್

# ಕಲಿಕಾ ಮತ್ತು ಬೋಧನೆಯ ಸಹಾಯಗಳು ದಾವೀದನ ಕುಟುಂಬ

*ದಾವೀದನ ತಾಯಿ.* ಸತ್ಯವೇದದಲ್ಲಿ ದಾವೀದನ ತಾಯಿಯ ಕುರಿತು ಕೆಲವೇ ವಾಕ್ಯಭಾಗಗಳಿವೆ ಮತ್ತು ಅವಳ ಹೆಸರು ಎಲ್ಲಿಯೂ ಕಂಡು ಬಂದಿಲ್ಲ. ದಾವೀದನ ಜೀವನವನ್ನು ವಿವರಿಸಲು ಅರವತ್ತಾರು ಅಧ್ಯಾಯಗಳನ್ನು ಉಪಯೋಗಿಸಲ್ಪಟ್ಟಿರುವಾಗ, ಇದು ಆಶ್ಚರ್ಯಕರವಾಗಿದೆ. ಅವಳಿಗೆ ಒಂದು ಕಳಂಕ ಹತ್ತಿಕೊಂಡಿರಬಹುದೆಂಬ ಒಂದು ಊಹೆಗೆ ಇದು ನಡೆಸಿದೆ.

ದಾವೀದನು, ಅಲೆಮಾರಿಯಾಗಿದ್ದಾಗ, ತನ್ನ ತಾಯಿ ಮತ್ತು ತಂದೆಯನ್ನು ಮೋವಾಬ್ಯದ ಅರಸನಿಗೆ ಒಪ್ಪಿಸಿದ್ದನು (1 ಸಮುವೇಲ 22:3), ಕೆಲವರು ಸೂಚಿಸುವಂತೆ, ಇಷಯನು ತನ್ನ ಅಜ್ಜ ಬೋಬಜನಂತೆ, ಮೋವಾಬ್ಯ ಪತ್ನಿಯನ್ನು ಪಡೆದಿದ್ದನು. ಇನ್ನೊಂದು ಊಹೆಯು ಕೀರ್ತನೆ 51ರಲ್ಲಿನ ಅವನ ಗಾಬರಿಯುಂಟು ಮಾಡುವ ಮಾತುಗಳಲ್ಲಿ ತೋರಿಬಂದಿದೆ "ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ" (ವಚನ 5). ಕ್ಯಾಲ್ವಿನರು ಇದನ್ನು ತಮ್ಮ ತತ್ವವಾದ "ಸಂಪೂರ್ಣ ಅನುವಂಶಿಕ ಪಾಪವನ್ನು" ಸಮರ್ಥಿಸಲು ಉಪಯೋಗಿಸುತ್ತಾರೆ, ಆದರೆ ಸತ್ಯವೇದವು ನಮಗೆ ಬೋಧಿಸುವ ಪ್ರಕಾರ ನಾವು "ಪಾಪದಲ್ಲಿ *ಹುಟ್ಟಿದವರಲ್ಲ*" - ಪ್ರತಿಯೊಬ್ಬನೂ ತನ್ನ ಪಾಪಕ್ಕೆ ಜವಾಬ್ದಾರನಾಗಿದ್ದಾನೆ, ತನ್ನ ಪೂರ್ವಜರ ಪಾಪಕ್ಕಲ್ಲ, ಆದಾಮನನ್ನೊಳಗೊಂಡು (ಪ್ರಸಂಗಿ 7:29; ಯೆಹೆಜ್ಕೇಲ 18:4, 19, 20; ಜೆಕರ್ಯ 12:1; ಮತ್ತಾಯ 18:3; 19:14; ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 2:6; 1 ಕೊರಿಂಥ 14:20; 2 ಕೊರಿಂಥ 5:10; ಗಲಾತ್ಯ 6:5; ಇತ್ಯಾದಿ). ದಾವೀದನು ತನ್ನ ಪಾಪವನ್ನು ಸೂಚಿಸಿ ಮಾತಾಡುತ್ತಿದ್ದಲ್ಲ, ಆದರೆ ತಾನು ಮಾತೃಗರ್ಭದಲ್ಲಿ ಮೂಡಿದಾಗ ಮತ್ತು ಜನಿಸಿದಾಗ ಇದ್ದ ಪಾಪದ ಪರಿಸರವನ್ನು ಕುರಿತು ಮಾತಾಡುತ್ತಿದ್ದನು. ಈ ಮಾತುಗಳು ಪಾಪಮಯವಾದ ಜಗತ್ತನ್ನು ಸೂಚಿಸಿ ಕವನ ರೂಪದಲ್ಲಿರಬಹುದು - ಆದರೆ ಈ ಮಾತುಗಳಿಗೆ ಒಂದು ಗಂಭೀರವಾದ ಅರ್ಥವಿರಬಹುದು "ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ" ಈ ಕೀರ್ತನೆಯು ವ್ಯಭಿಚಾರದ ಪಾಪದ ಕುರಿತಾಗಿದೆ; ತನ್ನ ತಾಯಿಯು ಆ ಪಾಪದ ತಪ್ಪಿನಲ್ಲಿ ಸಿಕ್ಕಿದ್ದಳು ಎಂದು ದಾವೀದನು ಹೇಳುತ್ತಿದ್ದನೋ? ದಾವೀದನು ಅನೈತಿಕ ಸಂಬಂಧದಿಂದ ಹುಟ್ಟಿದವನು ಎಂದು ಕೆಲವರು ಹೇಳುತ್ತಾರೆ, ಬೇಡವಾದ ಮಗು, ಕುಟುಂಬದ ಇತರರಿಗೆ ಒಂದು ನಾಚಿಕೆ.

ದಾವೀದನ ತಾಯಿಯ ರಹಸ್ಯವನ್ನು ನಾವು ಎಂದಿಗೂ ಬಿಡಿಸಲಿಕ್ಕಿಲ್ಲ, ಆದರೆ ಅವನು ಅವಳನ್ನು ಬಹಳವಾಗಿ ಪ್ರೀತಿಸುತ್ತಿದ್ದನು ಮತ್ತು ಎಂದಿಗೂ ಬಿಡಿಸಲಿಕ್ಕಿಲ್ಲ, ಆದರೆ ಅವನು ಅವಳನ್ನು ಬಹಳವಾಗಿ ಪ್ರೀತಿಸುತ್ತಿದ್ದನು ಮತ್ತು ಅವಳ ವಿಷಯದಲ್ಲಿ ಕಾಳಜಿ ವಹಿಸಿದನು ಎಂದು ತೋರಿಸುವದಕ್ಕೆ ಅನೇಕ ಸೂಚನೆಗಳಿವೆ (1 ಸಮುವೇಲ 22:3; 2 ಸಮುವೇಲ 19:37).

*ದಾವೀದನ ಸಹೋದರಿಯರು.* ದಾವೀದನ ಇಬ್ಬರು ಸಹೋದರಿಯರು, ಚೆರೂಯಳು ಮತ್ತು ಅಬೀಗೈಲ್ ಮತ್ತು ಅವರ ಮಕ್ಕಳ ಹೆಸರುಗಳು 1 ಪೂರ್ವಕಾಲ 2:16, 17ರಲ್ಲಿದೆ. ಚೆರೂಯಳ ಒಬ್ಬ ಮಗನ ಹೆಸರು ಯೋವಾಬ. ಅಬೀಗೈಲ್ (ಅಥವಾ ಅಬೀಗಲ್) ಎಂದು 2 ಸಮುವೇಲ 17:25ರಲ್ಲಿ ನಮೂದಿಸಲ್ಪಟ್ಟಾಗ, ಅವಳನ್ನು ಚೆರೂಯಳ (ಅವಳ ಮಗ ಯೋವಾಬ) ಸಹೋದರಿ ಎಂದು ಗುರುತಿಸಲಾಗಿದೆ. ಅವಳು ಇಷಯನ ಬದಲು "ನಾಹಾಶನ ಮಗಳು" ಎಂದು ಕರೆಯಲ್ಪಟ್ಟಿದ್ದಾಳೆ. ಇದಕ್ಕೆ ಅನೇಕ ವಿವರಣೆಗಳು ಕೊಡಲ್ಪಟ್ಟಿವೆ: (1) "ನಾಹಾಶ" ಇಷಯನ ಇನ್ನೊಂದು ಹೆಸರು. (2) "ನಾಹಾಶ" ಇದು ಇಷಯನ ಹೆಂಡತಿಯರಲ್ಲಿ ಒಬ್ಬಳ ಹೆಸರು. (3) ಇಷಯನ ಇಬ್ಬರು ಹೆಣ್ಣುಮಕ್ಕಳಿಂದ ಒಬ್ಬ ವಿಧವೆಯನ್ನು ಮದುವೆಯಾಗಿದ್ದನು, ಈ

ಅಂಶದ ಮೇಲೆ ಕಟ್ಟುನಿಟ್ಟಿನ ಅಭಿಪ್ರಾಯವಿದೆ.

*ಕುಟುಂಬದ ಇತರ ಸದಸ್ಯರೊಂದಿಗೆ ದಾವೀದನ ಸಂಬಂಧ.* ಈ ಎಲ್ಲಾ ಊಹೆಗಳನ್ನು ಒಟ್ಟಾಗಿ ಸೇರಿಸಿದರೆ, ದಾವೀದನು ಉಳಿದ ಎಲ್ಲರಿಗೆ ಅಥವ ಕೆಲವರಿಗೆ ಒಬ್ಬ ಮಲಮಗನಾಗಿದ್ದನು ಎಂಬ ಸಾಧ್ಯತೆ ಇದೆ. ಅವನು ಒಬ್ಬ ಹೊರಗಿನವನು ಎಂದು ತೋರುವದಕ್ಕೆ ಈ ವಿವರಣೆಯು ಸಹಾಯವಾಗುವದು.

